# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 312 |
| 2 | ಸದಸ್ಯರ ಹೆಸರು | : | ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 29.01.2026 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದ ಇಂಟೆಲಿಜೆನ್ಸ್ ಪೊಲೀಸ್ (ಗುಪ್ತಚರ ಇಲಾಖೆ)ಗೆ ಅಧಿಕಾರಿಗಳನ್ನು ಯಾವ ಪ್ರಕ್ರಿಯೆಯ ಮೂಲಕ ನೇಮಿಸಲಾಗುತ್ತದೆ ಅಥವಾ ನಿಯೋಜಿಸಲಾಗುತ್ತದೆ; ಈ ನೇಮಕಾತಿ / ನಿಯೋಜನೆಗೆ ಅನುಸರಿಸಲಾಗುವ ವಿಧಾನಗಳು ಮತ್ತು ಮಾರ್ಗಸೂಚಿಗಳು ಯಾವುವು; ಈ ನೇಮಕಾತಿ ಅಥವಾ ನಿಯೋಜನೆಗೆ ಅಂತಿಮ ಅನುಮೋದನೆ ನೀಡುವ ಪ್ರಾಧಿಕಾರ ಯಾರು; | ರಾಜ್ಯ ಗುಪ್ತವಾರ್ತೆ ಘಟಕವು ಒಂದು ವಿಶೇಷ ಘಟಕವಾಗಿದ್ದು, ಈ ಘಟಕದಲ್ಲಿ ನೇರ ನೇಮಕಾತಿ ಹಾಗೂ ಪೊಲೀಸ್ ಪ್ರಧಾನ ಕಛೇರಿಯ ಸ್ಥಾಯಿ ಆದೇಶ ಸಂಖ್ಯೆ:1008 ರನ್ವಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡಲಾಗುತ್ತಿದೆ.<br><br>ನೇಮಕಾತಿ/ನಿಯೋಜನೆಗೆ ಸಂಬಂಧಿಸಿದಂತೆ ಸರ್ಕಾರವು ವಿಧಿಸಿರುವ ಷರತ್ತುಗಳು ಮತ್ತು ನಿಬಂಧನೆಗಳನ್ನು ಅನುಸರಿಸಲಾಗುತ್ತಿದೆ ಮತ್ತು ಅಂತಿಮ ಅನುಮೋದನೆ ನೀಡುವ ಪ್ರಾಧಿಕಾರವು ಪೊಲೀಸ್ ಪ್ರಧಾನ ಕಚೇರಿಯಾಗಿರುತ್ತದೆ. |
| ಆ) | ಪೊಲೀಸ್ ಇಲಾಖೆಯ ಈ ಗುಪ್ತಚರ ವಿಭಾಗಗಳಿಗೆ ನಿಯೋಜನೆ ಆಧಾರದಲ್ಲಿ ಅಧಿಕಾರಿಗಳನ್ನು ನೇಮಿಸಲು ಅವಕಾಶವಿದೆಯೇ; ಇದ್ದಲ್ಲಿ, ಯಾವ ವರ್ಗದ, ಯಾವ ಸೇವೆಯ (IPS/KPS) ಇತರೆ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ; ಈ ನಿಯೋಜನೆಗೆ ಅನುಸರಿಸಲಾಗುತ್ತಿರುವ ಅರ್ಹತಾ ಮಾನದಂಡಗಳೇನು; | ರಾಜ್ಯ ಗುಪ್ತವಾರ್ತೆಗೆ ಪಿ.ಸಿ ಹುದ್ದೆಯಿಂದ ಪಿ.ಎಸ್.ಐ ಹುದ್ದೆಯವರೆವಿಗೂ ಪೊಲೀಸ್ ಪ್ರಧಾನ ಕಛೇರಿಯ ಸ್ಥಾಯಿ ಆದೇಶ ಸಂಖ್ಯೆ: 1008 ರನ್ವಯ ನಿಯೋಜನೆಗೊಳಪಡಿಸಲಾಗುತ್ತಿದೆ ಹಾಗೂ ಪಿಐ ಹುದ್ದೆಯಿಂದ ಐಪಿಎಸ್ ವೃಂದದವರೆಗೆ ರಾಜ್ಯ ಗುಪ್ತವಾರ್ತೆ ಘಟಕದಲ್ಲಿನ ರಿಕ್ತಸ್ಥಾನಗಳ ಲಭ್ಯತೆಯ ಮೇರೆಗೆ ರಾಜ್ಯ ಗುಪ್ತವಾರ್ತೆ ಘಟಕದ ಕಾರ್ಯ ನಿರ್ವಹಣೆಗೆ ಅನುವಾಗಲು ಅಧಿಕಾರಿಗಳನ್ನು ಕಾಲಕಾಲಕ್ಕೆ ವರ್ಗಾವಣೆ ಮೂಲಕ ಪೊಲೀಸ್ ಪ್ರಧಾನ ಕಛೇರಿ ಹಾಗೂ ಸರ್ಕಾರದಿಂದ ಭರ್ತಿ ಮಾಡಲಾಗುತ್ತಿರುತ್ತದೆ. |
| ಇ) | ಇಂಟೆಲಿಜೆನ್ಸ್ ಪೊಲೀಸ್ ಸಿಬ್ಬಂದಿಗಳಿಗೆ ಬಡ್ತಿ (Promotion) ಯ ಅವಕಾಶವಿದೆಯೇ; ಇದ್ದಲ್ಲಿ ಕೊನೆಯದಾಗಿ ಯಾವಾಗ ಬಡ್ತಿ ನೀಡಲಾಗಿದೆ; ಬಡ್ತಿಗೆ ಸಂಬಂಧಿಸಿದ ನಿಯಮಗಳು ಮತ್ತು ಮಾರ್ಗಸೂಚಿಗಳು ಯಾವುವು; ಈ ನಿಯಮಗಳಿಗೆ ಕೊನೆಯದಾಗಿ ಯಾವಾಗ ತಿದ್ದುಪಡಿ ತರಲಾಗಿದೆ; | ಇಂಟೆಲಿಜೆನ್ಸ್ ಘಟಕವು ಒಂದು ವಿಶೇಷ ಘಟಕವಾಗಿದ್ದು ಸದರಿ ಘಟಕದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಸದರಿ ಘಟಕದ ಪೊಲೀಸ್ ಸಿಬ್ಬಂದಿಗಳನ್ನು (ಪಿ.ಸಿ ಯಿಂದ ಪಿ.ಎಸ್.ಐ) ನಿಯೋಜನೆಯಿಂದ ಹಾಗೂ ಪಿ.ಎಸ್.ಐ (ರಾಜ್ಯ ಗುಪ್ತವಾರ್ತೆ) ವೃಂದದ ಹುದ್ದೆಗೆ ನೇರ ನೇಮಕಾತಿಯಿಂದ ಭರ್ತಿ ಮಾಡಲು ಅವಕಾಶವಿರುತ್ತದೆ ಹಾಗೂ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ (ಪಿ.ಸಿ ಯಿಂದ ಪಿ.ಎಸ್.ಐ ಹುದ್ದೆವರೆಗೆ) ಮುಂಬಡ್ತಿಯನ್ನು ಅವರ ಮಾತೃ ಘಟಕದಲ್ಲಿ ನೀಡಲಾಗುತ್ತಿದೆ.<br><br>ರಾಜ್ಯ ಗುಪ್ತವಾರ್ತೆ ಘಟಕದಲ್ಲಿ ಕೊನೆಯದಾಗಿ ದಿನಾಂಕ: 31.01.2025 ರಂದು ಪಿ.ಎಸ್.ಐ ಹುದ್ದೆಯಿಂದ ಪಿ.ಐ ಹುದ್ದೆಗೆ ಕೆ.ಸಿ.ಎಸ್. ನಿಯಮ 32 ರಡಿಯಲ್ಲಿ ಸ್ವತಂತ್ರ್ಯ ಪ್ರಭಾರದಲ್ಲಿರಿಸಿ) ಪೊಲೀಸ್ ಪ್ರಧಾನ ಕಚೇರಿಯಿಂದ ಆದೇಶಿಸಲಾಗಿರುತ್ತದೆ. |

<table>
<tr><td></td><td></td><td>ಕರ್ನಾಟಕ ರಾಜ್ಯ ಪೊಲೀಸ್ ಲಿಪಿಕ ಸಿಬ್ಬಂದಿ ಒಳಗೊಂಡಂತೆ (ನೇಮಕಾತಿ) ನಿಯಮ, 2004 ರನ್ವಯ ಪಿಎಸ್ಐ ಹುದ್ದೆಯಿಂದ ಪಿಐ ಹುದ್ದೆಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ. ಈ ನಿಯಮಗಳಿಗೆ ಯಾವುದೇ ತಿದ್ದುಪಡಿಯಾಗಿರುವುದಿಲ್ಲ.</td></tr>
<tr><td>ಈ)</td><td>ಪ್ರಸ್ತುತ ತಂತ್ರಜ್ಞಾನಧಾರಿತ ಹಾಗೂ ಸಂಕೀರ್ಣ ಭದ್ರತಾ ವ್ಯವಸ್ಥೆಯ ಹಿನ್ನೆಲೆಗಳಲ್ಲಿ, ಇಂಟೆಲಿಜೆನ್ಸ್ ಪೊಲೀಸ್ ಸಿಬ್ಬಂದಿಗಳಿಗೆ ಅಗತ್ಯವಿರುವ ತಾಂತ್ರಿಕ ಕೌಶಲ್ಯ, ಸೈಬರ್ ಗುಪ್ತಚರ, ಆಧುನಿಕ ಮಾಹಿತಿ ವಿಶ್ಲೇಷಣೆ ಅಭಿವೃದ್ಧಿಪಡಿಸಲು ಇಲಾಖೆ ಯಾವ ತರಬೇತಿ ಹಾಗೂ ಕೌಶಲ್ಯಾಭಿವೃದ್ಧಿ ಕ್ರಮಗಳನ್ನು ಕೈಗೊಂಡಿದೆ;</td><td>ಪ್ರಸ್ತುತ ರಾಜ್ಯ ಗುಪ್ತವಾರ್ತೆ ಘಟಕದ ತರಬೇತಿ ಅಕಾಡೆಮಿಯಲ್ಲಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ, SIIMS (State Intelligence Information Management System), PMMC (PRINT MEDIA MONITORING CELL), SMMC (SOCIAL MEDIA MONITORING CELL ) ಮತ್ತು IMMC (INTELLIGENCE MEDIA MONITORING CELL) ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ.<br><br>ಭದ್ರತಾ ವರ್ಗೀಕರಣಗಳ ಶ್ರೇಣಿಗೆ ತಕ್ಕಂತೆ, ತರಬೇತಿಯನ್ನು ನೀಡಲಾಗುತ್ತಿದೆ.<br><br>ಸೈಬರ್ ಗುಪ್ತಚರಕ್ಕೆ ಸಂಬಂಧಿಸಿದಂತೆ ಓಪನ್ ಸೋರ್ಸ್ ಇಂಟೆಲಿಜೆನ್ಸ್, ಆಟೋಮೊಬೈಲ್ ಫೊರೆನ್ಸಿಕ್ಸ್ & ಡಿಜಿಟಲ್ ಫೊರೆನ್ಸಿಕ್ಸ್, ಸಿಂಪ್ಲಿಫೈಡ್ ಸೈಬರ್ ಟ್ರೆಂಡ್ಸ್, ಚಾಟ್ ಜಿಪಿಟಿ, ಸೋಷಿಯಲ್ ಮೀಡಿಯಾ & ಸೈಬರ್ ಕ್ರೈಂ ಇನ್ವೆಸ್ಟಿಗೇಷನ್, ಸೈಬರ್ ಹೈಜೀನ್ ಮತ್ತು ಸೈಬರ್ ಅವೇರ್‌ನೆಸ್ ತರಬೇತಿಗಳನ್ನು ನೀಡಲಾಗುತ್ತಿದೆ.<br><br>ಉಗ್ರವಾದ, ವಿದೇಶಿಯವರ ಕಣ್ಗಾವಲು, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ಪ್ರಕ್ರಿಯೆ ಸಾಮಾಜಿಕ, ರಾಜಕೀಯ ಹಾಗೂ ಗುಪ್ತವಿಚಾರಣೆಗಳಿಗೆ ಸಂಬಂಧಿಸಿದಂತೆ ನುರಿತ ತಜ್ಞರಿಂದ ತರಬೇತಿಯನ್ನು ನೀಡಲಾಗುತ್ತಿದೆ.</td></tr>
<tr><td>ಉ)</td><td>ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ಸೈಬರ್ ವಂಚನೆ ಪ್ರಕರಣಗಳ ಪೈಕಿ ಎಷ್ಟು ಪ್ರಕರಣಗಳಲ್ಲಿ ಮೋಸಹೋದ ದೂರುದಾರರ ಹಣವನ್ನು ವಸೂಲಾತಿ ಮಾಡಲಾಗಿದೆ; ವಸೂಲಾತಿ ಮಾಡಲಾದ ಮೊತ್ತದ ವಿವರಗಳೇನು;</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಸೈಬರ್ ವಂಚನೆ ಪ್ರಕರಣಗಳ ಸಂಖ್ಯೆ, ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ, ಹಾಗೂ ವಸೂಲಾತಿ ಮಾಡಲಾದ ಮೊತ್ತದ ವಿವರ ಈ ಕೆಳಗಿನಂತಿದೆ:-
<table>
<tr><th>ವರ್ಷ</th><th>ದಾಖಲಾದ ಸೈಬರ್ ಪ್ರಕರಣಗಳ ಸಂಖ್ಯೆ</th><th>ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ</th><th>ರಿಕವರಿ ಮಾಡಲಾದ ಮೊತ್ತ</th></tr>
<tr><td>2023</td><td>22256</td><td>6209</td><td>1682343007</td></tr>
<tr><td>2024</td><td>22482</td><td>3892</td><td>3321463270</td></tr>
<tr><td>2025</td><td>14889</td><td>1352</td><td>1577267165</td></tr>
</table>
</td></tr>
</table>

ಸಂಖ್ಯೆ: ಒಇ 71 ಪಿಇಜಿ 2026

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು